ದಿನಾಂಕ 12-09-2025 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು :** ಪ್ರತಿವಾದಿಗಳ ಪರ ಶ್ರೀ ಎಸ್ ಕೆ ಎಸ್ ವಕೀಲರಿಂದ.

ಸಾಕ್ಷಿಗೆ ನಿಪಿ 13 ಅನ್ನು ತೋರಿಸಿ ಅದರಲ್ಲಿ ಸಾರ್ವಜನಿಕರು ಆ ರಸ್ತೆಯಲ್ಲಿ ಓಡಾಡುತ್ತಾರೆ ಮತ್ತು ಬಳಕೆ ಮಾಡುತ್ತಾರೆ ಎಂದು ಬರೆದಿರುತ್ತೀರಿ ಎಂದರೆ ಸರಿ. ಆ ಸಾರ್ವಜನಿಕರು ಪ್ರತಿವಾದಿ ಅತಿಕ್ರಮಣ ಮಾಡಿದ್ದಾರೆ ಎಂದು ದೂರು ನೀಡಿದ್ದಾರಾ ಅಥವಾ ತಕರಾರು ಮಾಡಿದ್ದಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆ ಸಾರ್ವಜನಿಕರು ಪ್ರತಿವಾದಿ ಅತಿಕ್ರಮಣ ಮಾಡಿದ್ದಾರೆ ಎಂದು ದೂರು ನೀಡಿದ್ದಾರಾ ಅಥವಾ ತಕರಾರು ಮಾಡಿದ್ದಾರಾ ಎಂದು ತಿಳಿದುಕೊಳ್ಳಲು ಪ್ರತ್ನಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪಂಚಾಯತಿವರು ಸಾರ್ವಜನಿಕರಿಗೆ ಪ್ರತಿವಾದಿ ತೊಂದರೆ ಮಾಡಿದ್ದಾರೆ ಎಂದು ಕ್ರಮ ಕೈಗೊಂಡಿದ್ದಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿ ಅತಿಕ್ರಮಣ ಮಾಡಿದ್ದಾರೆ ಎಂದು ಪಂಚಾಯತಿಗೆ ನೀವು ಅರ್ಜಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎನ್ನುತ್ತಾರೆ. ಪಂಚಾಯತಿವರು ಆ ಬಗ್ಗೆ ಕ್ರಮ ಕೈಗೊಂಡಿದ್ದೀರಾ ಎಂದರೆ ಸಾಕ್ಷಿ ನ್ಯಾಯಾಲಯಾದಲ್ಲಿ ಇದೆ ನ್ಯಾಯಾಲಯದಿಂದ ಆದೇಶ ಬರಲಿ ಎನ್ನುತ್ತಾರೆ. ಪಂಚಾಯತಿಗೆ ನೀವು ಯಾವ ದಿನಾಂಕದಂದು ಅರ್ಜಿ ಕೊಟ್ಟಿದ್ದೀರಾ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಪಂಚಾಯತಿವರು ನ್ಯಾಯಾಲಯಾದಲ್ಲಿ ಇದೆ ನ್ಯಾಯಾಲಯದಿಂದ ಆದೇಶ ಬರಲಿ ಎಂದು ಲಿಖಿತ ರೂಪದಲ್ಲಿ ಕೊಟ್ಟಿದ್ದಾರೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಹಾಗಿದ್ದರೆ ನೀವು ಪಂಚಾಯತಿಗೆ ದಾವೆ ಹೂಡಿದ ನಂತರ ಅರ್ಜಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ದಾವೆ ಹೂಡುವ ಮೊದಲು ಅರ್ಜಿ ಕೊಟ್ಟಿದ್ದೇವೆ ಎನ್ನುತ್ತಾರೆ. ದಾವೆ ಹೂಡುವ ಮೊದಲು ಕೊಟ್ಟ ಅರ್ಜಿಗೆ ಉತ್ತರ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಯಾವುದೇ ಉತ್ತರ ಬಂದಿಲ್ಲ ಎನ್ನುತ್ತಾರೆ. ಪಂಚಾಯತಿಗೆ ಅರ್ಜಿ ಕೊಟ್ಟು ಅವರು ಉತ್ತರ ಕೊಡದಿದ್ದರೆ ಮೇಲಾಧಿಕಾರಿಗೆ ಅರ್ಜಿ

ಕೊಡಬೇಕಾಗುತ್ತದೆ ಎಂದರೆ ಸಾಕ್ಷಿ ಹೌದು, ಆದರೆ ನಾನು ಮೌಖಿಕವಾಗಿ ಕೇಳಿದ್ದೇನೆ ಎನ್ನುತ್ತಾರೆ. ಲಿಖಿತವಾಗಿ ಮೇಲಾಧಿಕಾರಿಗಳಿಗೆ ಅರ್ಜಿ ಕೊಟ್ಟು ಪರಿಹಾರ ಪಡೆಯಬಹುದಿತ್ತು ಎಂದರೆ ಸಾಕ್ಷಿ ನಾನು 3-4 ಬಾರಿ ಅರ್ಜಿ ಕೊಟ್ಟಿದ್ದೇನೆ ಎನ್ನುತ್ತಾರೆ. ದಾವೆ ಹೂಡಿದ ನಂತರ ನನ್ನ ತಮ್ಮ, ನನ್ನ ತಾಯಿ, ನನ್ನ ತಂದೆಯವರು ಮರಣ ಹೊಂದಿರುತ್ತಾರೆ ಎಂದರೆ ಸರಿ. ಸದರಿಯವರ ಅಂತ್ಯ ಕ್ರಿಯೆಯನ್ನು ಸಾರ್ವಜನಿಕ ರುದ್ರ ಭೂಮಿಯಲ್ಲಿ ಮಾಡಿರುತ್ತೇನೆ ಎನ್ನುತ್ತಾರೆ. ಅವರ ಅಂತ್ಯ ಕ್ರಿಯೆ ಸಮಯದಲ್ಲಿ ಯಾವುದೇ ತೊಂದರೆ ಆಗಲಿಲ್ಲ ಎಂದರೆ ಸರಿ. ಅವರ ಅಂತ್ಯ ಕ್ರಿಯೆ ಸಮಯದಲ್ಲಿ ಯಾವುದೇ ತೊಂದರೆ ಆಗಲಿಲ್ಲ ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಅಂತ್ಯ ಕ್ರಿಯೆ ಸಮಯದಲ್ಲಿ ತೊಂದರೆ ಆಗಿತ್ತು ಎಂದು ಗ್ರಾಮ ಪಂಚಾಯತಿಗೆ ಅರ್ಜಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಯಾವುದೇ ತೊಂದರೆ ಆಗಲಿಲ್ಲ ಆದ್ದರಿಂದ ನೀವು ಅರ್ಜಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾರ್ವಜನಿಕರು ತಮಗೆ ಓಡಾಡಲು ತೊಂದರೆ ಆಗಿದೆ ಎಂದು ಯಾವುದಾದರೂ ನ್ಯಾಯಾಲಯದಲ್ಲಿ ಸಾರ್ವಜನಿಕ ರಸ್ತೆಯ ಸಲುವಾಗಿ ದಾವೆಯನ್ನು ಸಲ್ಲಿಸಿದ್ದಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿದಂತೆ ನಿಪಿ 5 ರಲ್ಲಿ ಎನ್ ಮತ್ತು ಎಫ್ ಸಾರ್ವಜನಿಕ ರಸ್ತೆಯನ್ನು ತೋರಿಸುತ್ತದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಾವೆ ಹೂಡಿದ ನಂತರ ಪ್ರತಿವಾದಿ ಕಲ್ಲು ಮಣ್ಣು ಹಾಕಿ ಗೋಡೆ ಕಟ್ಟಿ ರಸ್ತೆ ಅಡೆತಡೆ ಮಾಡಿದ್ದಾರೆ ಎಂದು ಸುಳ್ಳು ಅರ್ಜಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ ಅವರ ಜಾಗದಲ್ಲಿ ಅವರು ಕಂಪೌಂಡ್ ಕಟ್ಟಿ ವ್ಯವಹಾರ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ, ನಾವು ಓಡಾಡುವ ರಸ್ತೆಯಲ್ಲಿ ಕಂಪೌಂಡ್ ಕಟ್ಟಿ ಅಡೆತಡೆ ಮಾಡುತ್ತಿದ್ದಾರೆ. ಪ್ರತಿವಾದಿ ಅವರ ಜಾಗದಲ್ಲಿ ಕಲ್ಲು ಮಣ್ಣು ಹಾಕಿ ಗೋಡೆ ವ್ಯವಹಾರ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅದು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಜಾಗ ಎನ್ನುತ್ತಾರೆ. ಅರಣ್ಯ ಇಲಾಖೆಯವರು ಪ್ರತಿವಾದಿಯ ವಿರುದ್ಧ ಕ್ರಮ ಕೈಗೊಂಡಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅರಣ್ಯ ಇಲಾಖೆಯವರಿಗೆ ಸಂಬಂಧಪಟ್ಟ ಜಾಗ ಆಗದ

ಕಾರಣ ಮತ್ತು ಆ ಜಾಗ ಪ್ರತಿವಾದಿಗೆ ಸಂಬಂಧ ಪಟ್ಟ ಜಾಗ ಆಗಿದ್ದರಿಂದ ಅರಣ್ಯ ಇಲಾಖೆಯವರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ 35 ರ ಸಂಖ್ಯೆ 8 ಭಾವಚಿತ್ರವನ್ನು ತೋರಿಸಿ ಅದನ್ನು ನೋಡಿದರೆ ಅದರಲ್ಲಿ ಅರಣ್ಯ ದಟ್ಟವಾಗಿ ಕಾಣುತ್ತದೆ ಎಂದರೆ ಸರಿ. ಅಲ್ಲಿ ರಸ್ತೆ ಇತ್ತು ಪ್ರತಿವಾದಿ ನಿಮ್ಮ ಓಡಾಟಕ್ಕೆ ತೊಂದರೆ ಮಾಡಿದ್ದಾರೆ ಎಂದು ಸುಳ್ಳು ದಾವೆ ಹೂಡಿದ್ದೀರಿ ಎಂದರೆ ಸರಿಯಲ್ಲ. ಸರ್ವೇ ನಂಬರ 1/1 ರಲ್ಲಿನ ವ್ಯಕ್ತಿಗಳು ಪ್ರತಿವಾದಿ ರಸ್ತೆ ಅಡೆ ತಡೆ ಮಾಡಿದ ಬಗ್ಗೆ ದಾವೆ ಹೂಡಿದ್ದಾರೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೇ ನಂಬರ 1/3 ರ ಎರಡೂ ಬದಿ ಗಾಂವಠಾಣಾ ಮತ್ತು ರಸ್ತೆ ಇದ್ದರೂ ಸಹ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿದ್ದೀರ ಎಂದರೆ ಸರಿಯಲ್ಲ. ವಾದ ಪತ್ರ ಮತ್ತು ಮುಖ್ಯ ವಿಚಾರಣೆಯಲ್ಲಿ ಬರೆದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ನಿಪಿ 4 ಮತ್ತು 5 ಕ್ಕೂ ಮತ್ತು ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ 4 ಮತ್ತು 5 ರಲ್ಲಿ ರಸ್ತೆ ಇದ್ದ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.